ಹೇಳಿಬಿಡುತ್ತಿದ್ದೆ. ಹಾಂ, ಅದು ನನ್ನಿಂದಾದ ದೊಡ್ಡ ತಪ್ಪು... ಒಪ್ಪುತ್ತೇನೆ. ಆದರೆ ನೀವು ಅವರ ಬಗ್ಗೆ ಒಂದು ಮಾತು ಸಹ ಕೇಳಲಿಲ್ಲವಲ್ಲ...! ಕೇವಲ ಅವರನ್ನು ಭೇಟಿಯಾಗಬೇಡ, ಅವರ ಮನೆಗೆ ಹೋಗಬೇಡ... ಎಂದಷ್ಟೇ ಹೇಳಿದಿರಿ. ಆ ಹೊತ್ತಿಗೆ ನನ್ನ ಮತ್ತು ಅವರ ಸಂಬಂಧದ ಬಗ್ಗೆ ನಿಮಗೆ ಮಾಹಿತಿ ದೊರೆತಿತ್ತು ಎಂದು ನನಗೆ ಅರ್ಥವಾಗಿತ್ತು ಮತ್ತು ಅದು ಸ್ವಾಭಾವಿಕವಾಗಿತ್ತು ಕೂಡ. ಅವರೂ ಕೂಡ ನಿಮ್ಮ ಹಾಗೆಯೇ ಕಲಾವಿದರು. ಇದೇ ಮಹಾನಗರದಲ್ಲಿದ್ದಾರೆ. ಇಂದು ಅವರ ಬಗ್ಗೆಯೂ ಹೇಳಿಬಿಡುತ್ತೇನೆ. ಅವರು ನನ್ನ ಹತ್ತಿರದ ಸಂಬಂಧಿ ಎಂಬುದು ನಿಮಗೆ ಗೊತ್ತು. ನಾನೇ ಅವರಿಗೆ ಇಲ್ಲಿ ನನಗಾಗಿ ಒಂದು ನೌಕರಿ ಕೊಡಿಸಿ ಕೊಡುವಂತೆ ಹೇಳಿದ್ದೆ. ಅದಕ್ಕಾಗಿ ನಾನು ಅವರ ಸೂಚನೆ ಮೇರೆಗೆ ಅವರ ಮನೆಯಲ್ಲಿಯೇ ಇರತೊಡಗಿದೆ. ನನಗೆ ನೌಕರಿ ಹುಡುಕಲು ಅವರು ಸಾಕಷ್ಟು ಸುತ್ತಿ, ಒದ್ದಾಡಿ ಕೊನೆಗೂ ಒಂದು ನೌಕರಿ ವ್ಯವಸ್ಥೆ ಮಾಡಿದರು. ಅವರ ಶಿಫಾರಸಿನ ಮೇರೆಗೆ ಒಬ್ಬ ಪ್ರಕಾಶಕನ ಕಚೇರಿಯಲ್ಲಿ ಸ್ವಲ್ಪ ದಿನ ಕೆಲಸ ಮಾಡಿದೆ. ಆದರೆ ಆ ಕೆಲಸ ನನಗೆ ಹಿಡಿಸಲಿಲ್ಲ. ಹಾಗಾಗಿ ಈಗಿರುವ ನೌಕರಿಗೆ ನಾನು ಅಡ್‌ಹಾಕ್ ನೆಲೆಯಲ್ಲಿ ಸೇರಿಕೊಂಡೆ. ನನ್ನ ಬಗ್ಗೆ ಅವರಿಗಿದ್ದ ಆಕರ್ಷಣೆಯ ಅರಿವು ನನಗೆ ಖಂಡಿತಾ ಇತ್ತು. ನಿಜ ಹೇಳಬೇಕೆಂದರೆ ನಾನೂ ಸಹ ಅವರ ಸೆಳೆತಕ್ಕೆ ಒಳಗಾಗಿದ್ದೆ. ನನಗಾಗ ಮೂವತ್ತು ವರ್ಷ ವಯಸ್ಸು... ಶರೀರದ ವಯೋಸಹಜ ಬೇಡಿಕೆಯೂ ಸ್ವಾಭಾವಿಕವಾಗಿಯೇ ಇತ್ತು. ಹೀಗೆ ನನ್ನ ಮತ್ತು ಅವರ ಸಂಬಂಧ ಬೆಸೆದು ನಿಮ್ಮನ್ನು ಸೇರುವ ತನಕ ಮುಂದುವರೆದಿತ್ತು. ಆದರೆ ಇದಾದ ಬಳಿಕ ಖಂಡಿತಾ ಇಲ್ಲ. ಪ್ರಾರಂಭದಲ್ಲಿ ನೀವೇ ಹೇಳಿದ್ದನ್ನು ಅಕ್ಷರಶಃ ನೀವು ಪಾಲಿಸುತ್ತೀರಿ ಎಂಬ ನಂಬಿಕೆ ನನ್ನಲ್ಲಿ ಇತ್ತು. ಸತ್ಯಹೇಳಬೇಕೆಂದರೆ ಆಗ ನನ್ನ ದೃಷ್ಟಿಯಲ್ಲಿ ನಿಮ್ಮ ಸ್ಥಾನ ಉನ್ನತವಾಗಿತ್ತು. ಆದರೆ ಅದೆಲ್ಲ ನನ್ನ ಭ್ರಮೆಯಾಗಿತ್ತು.

ನೀವು ನಮ್ಮಿಬ್ಬರು ಮಕ್ಕಳ ಬಗ್ಗೆ ಯೋಚಿಸಲೇ ಇಲ್ಲ. ಹಾಗಿದ್ದ ಮೇಲೆ ನೀವು ಅವರಿಗೆ ಜನ್ಮ ನೀಡಿದ್ದಾದರೂ ಏಕೆ? ಈಗ ಎಲ್ಲಿಗಾದರೂ ಹೋಗುವಾಗ ಕೊನೇಪಕ್ಷ ನನಗೆ ಹೇಳಿಯಾದರೂ ಹೋಗಬಹುದಿತ್ತು. ಇರಲಿ. ಮಕ್ಕಳನ್ನು ನಾನು ಸಾಕುತ್ತೇನೆ. ಹುಂ, ಇಷ್ಟಾಗಿಯೂ ಈ ಮನೆಗೆ ನಿಮ್ಮ ಆರ್ಥಿಕ ಕೊಡುಗೆಯಾದರೂ ಎಷ್ಟಿತ್ತು...? 'ನಾನು ಮನೆಯಿಂದ ಹೊರಟುಹೋಗುತ್ತಿದ್ದೇನೆ. ನನ್ನನ್ನು ಹುಡುಕುವ ಪ್ರಯತ್ನ ಮಾಡಬೇಡ...' ಎಂದಷ್ಟೇ ಬರೆದಿಟ್ಟು ಹೋಗಿರುವುದರಿಂದಲೇ ಮಕ್ಕಳಿಗೆ ಸಮಾಧಾನ ಹೇಳಲು, ಅವರಿಗೆ ಧೈರ್ಯ ತುಂಬಲು ನನ್ನಿಂದ ಸಾಧ್ಯವಿದೆಯೇ...? ನೀವು ಹೋಗಿರುವುದಕ್ಕೆ ಕಾರಣ ಏನೆಂಬುದು ಮಕ್ಕಳಿಗೆ ತಿಳಿದಿಲ್ಲ... ಮುಂದೆ ಎಂದಿಗೂ ತಿಳಿಯುವುದೂ ಇಲ್ಲ. ದೊಡ್ಡವರಾದ ಮೇಲೆ ಅವರೂ ಕೂಡ ನಿಮ್ಮನ್ನು ಕೇವಲ ಹೆದರುಪುಕ್ಕಲ ಎಂದೇ ಕರೆಯುತ್ತಾರೆ. ■

# ಬೊಂಬಿನಲ್ಲೂ ಸಂಗೀತ!



ಅಲ್ಲಿ ಕೂಗುವ ಹಕ್ಕಿಗಳ ಧ್ವನಿ ಮೊಳಗುತ್ತಿತ್ತು. ಹಾಗಂತ ಅಲ್ಲಿ ಹಕ್ಕಿಗಳೇನೂ ಇರಲಿಲ್ಲ! ಗೆಜ್ಜೆಗಳ ಸದ್ದು ಕೇಳಿಸುತ್ತಿತ್ತು. ಹಾಗಂತ ಭರತನಾಟ್ಯ ಕಲಾವಿದರೇನೂ ನರ್ತಿಸುತ್ತಿರಲಿಲ್ಲ! ಆ ಸದ್ದು, ಧ್ವನಿಗಳ ಇಂಪೆಲ್ಲಾ ಬಿದಿರಿನ ವಾದ್ಯಗಳಿಂದ ಪ್ರತಿಧ್ವನಿಸುತ್ತಿದ್ದವು.

ಬಿದಿರು ಬೊಂಬಿನಲ್ಲಿಯೂ ಸಂಗೀತದ ಇಂಪು ಮೊಳಗಿಸಬಹುದು ಎಂಬುದನ್ನು ಉನ್ನಿಕೃಷ್ಣನ್ ತಂಡ ತೋರಿಸಿಕೊಟ್ಟಿದೆ. ಕೇರಳ ರಾಜ್ಯದ ತ್ರಿಶೂರ ಜಿಲ್ಲೆಯ ಕೊಟ್ಟನಲ್ಲೂರ್‌ನ ಉನ್ನಿಕೃಷ್ಣನ್ ಈ ಸಂಗೀತ ತಂಡದ ಮುಖ್ಯಸ್ಥ. ಅಲ್ಲದೆ ಎಲ್ಲಾ ಸಂಗೀತ ವಾದ್ಯಗಳ ಸಂಶೋಧಕನೂ ಹೌದು.

ಬಿದಿರಿನ ವಾದ್ಯಗಳಿಂದ ಸಂಗೀತ ನುಡಿಸುವ ದೇಶದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಈ ತಂಡ ಪಾತ್ರವಾಗಿದೆ. ಉನ್ನಿಕೃಷ್ಣನ್ ಅವರು ಬಡ ಕುಟುಂಬದಲ್ಲಿ ಜನಿಸಿದವರು. ಬಿದಿರಿನ ಉತ್ಪನ್ನಗಳ ತಯಾರಿಕೆಯೇ ಇವರ ಕುಟುಂಬದ ಮುಖ್ಯ ಕಸುಬು.

ತಂದೆತಾಯಿ ಸಿದ್ಧಪಡಿಸುತ್ತಿದ್ದ ಬಿದಿರಿನ ಉತ್ಪನ್ನಗಳನ್ನು ವಸ್ತುಪ್ರದರ್ಶನಗಳಲ್ಲಿ ಇಟ್ಟು ಮಾರಾಟ ಮಾಡುವುದು ಉನ್ನಿಕೃಷ್ಣನ್ ಅವರ ಕೆಲಸವಾಗಿತ್ತು. ವಸ್ತು ಪ್ರದರ್ಶನಗಳಲ್ಲಿ ಇದ್ದ ಇವರ ವಸ್ತುಗಳನ್ನು ಯಾರೂ ಖರೀದಿಸುತ್ತಿರಲಿಲ್ಲ. ಆದರೂ ಮಾರಾಟ ಮಾಡುವ ಉತ್ಸಾಹ ಮಾತ್ರ ಬತ್ತಲಿಲ್ಲ. ವಸ್ತು ಪ್ರದರ್ಶನದಲ್ಲಿ ಕುಳಿತು ಕೊಳಲನ್ನು ನುಡಿಸಿ ಜನರನ್ನು ರಂಜಿಸಿದರು. ಸಹಜವಾಗಿಯೇ ಉನ್ನಿಕೃಷ್ಣನ್ ಅವರ ಸ್ಟಾಲ್‌ನತ್ತ ಜನರು ಮುಗಿಬಿದ್ದರು. ವಾದ್ಯಪರಿಕರಗಳನ್ನು ಖರೀದಿಸತೊಡಗಿದರು. ಮಾರಾಟವೂ ಹೆಚ್ಚತೊಡಗಿತು. ಉನ್ನಿಕೃಷ್ಣನ್ ಅವರು ಸಂಗೀತದ ಹೊಸ ಆವಿಷ್ಕಾರ ಮಾಡಲು ಆ ಉತ್ಸಾಹವೇ ಪ್ರೇರಣೆ ಆಯಿತು.

ಅವರು ಬಿದಿರಿನಿಂದ ಒದಕುಜಾಲ, ಅಂಗುಲಾಂಗ್, ಪಾಕನ್ನಾರ ವಾದ್ಯಂ, ಮರಮ್, ಥೋಡಿ, ವೇದಿಚೆನಲಂಬು, ಕುಜಿತಾಲಮ್, ಅಂಬಾ, ಮರಿಂಬಾ, ನೋಮಡಿ, ನಾಜಲಿಪ್ರು... ಮುಂತಾದ ಸಂಗೀತ ವಾದ್ಯಗಳನ್ನು ಸಿದ್ಧಪಡಿಸಿದ್ದಾರೆ. ಈ ವಾದ್ಯಗಳ ಮೂಲಕವೇ ಸಂಗೀತದ ನಾದ ಮೊಳಗಿಸಿ ಮೋಡಿ ಮಾಡುತ್ತಾರೆ. ವಿವಿಧ ಆಕಾರ, ಗಾತ್ರದಲ್ಲಿ ಕತ್ತರಿಸಿ, ಜೋಡಿಸಲ್ಪಟ್ಟ ಬಿದಿರಿನ ತುಂಡುಗಳಿಂದ ಸಂಗೀತದ ಸುಧೆ ಹರಿಸುವುದನ್ನು ಕೇಳುವುದೇ ಪರಮಾನಂದ.

ಕಾಡಿನಲ್ಲಿಯೇ ಆರಂಭವಾದ ಈ ವಿನೂತನ ಸಂಗೀತದ ಇಂಪು ಮಹಾರಾಷ್ಟ್ರ, ದೆಹಲಿ, ತಮಿಳುನಾಡು, ಕೇರಳ, ಕರ್ನಾಟಕದ ವಿವಿಧ ಊರುಗಳಲ್ಲಿಯೂ ಹರಿದಿದೆ.

■ **ಗಣಪತಿ ಹಾಸ್ಪುರ**